

ನೋಡಿದೊಡನೆಯೇ ಕರಮಚಂದ ಗಟ್ಟಿಯಾಗಿ ನಕ್ಕ.

"ನಾನು ಹೇಳಿದ್ದು ನಿಜವಾಯಿತಲ್ಲ! ದೇವಸ್ಥಾನದ ಸೈಡಿದ್ದು ಅಂತ ಬರೆದದ್ದು ಮನೆ ಗುರುತಿಸಲಿಕ್ಕಲ್ಲ!"

ಗುಡಿಯ ಎಡಪಕ್ಕದಲ್ಲಿ ಖಾಲಿ ಜಾಗ. ನಂತರ ವಿಳಾಸದಲ್ಲಿದ್ದ ಮನೆ. ಆಮೇಲೆ ಉದ್ದಕ್ಕೂ ಮೂರು ಖಾಲಿ ಸೈಟುಗಳು. ಬಲಭಾಗದಲ್ಲಿ ಮೈದಾನ! ನಾವು ಕಾಂಪೌಂಡು ಪ್ರವೇಶಿಸಿದೆವು.

ಅಲ್ಲಿ ವಾಸ್ತವ್ಯವಿಲ್ಲದೇ ಕೆಲವು ಸಮಯವಾಗಿದೆಯೆಂಬುದನ್ನು ಬೆಳೆದ ಹುಲ್ಲುಪೊದೆಗಳೇ ಸಾರುತ್ತಿದ್ದವು. ಮುಚ್ಚಿದ ಕಿಟಕಿಗಳು. ದೂಳು, ಜೇಡರಬಲೆ, ಮಾಸಿದ ಗೋಡೆ. ಕಾಂಡೇರ ಶಮಿ ಎಲ್ಲಿಗೆ ಹೋಗಿದ್ದಾನೆ?

"ಪಾಳುಬಿದ್ದ ಮನೆಯ ವಿಳಾಸವನ್ನು ಯಾಕಾಗಿ ನೀಡಿದರು? ಕುತೂಹಲಕಾರಿಯಾಗಿದೆ. ನಾವೀಗ ಶಮಿಯನ್ನು ಭೇಟಿಯಾಗಬೇಕು." ಕರಮಚಂದ ಹೇಳಿದ.

ರಸ್ತೆಯ ಆ ಪಕ್ಕದಲ್ಲಿ, ಮನೆಯೆದುರು ನಿಂತ ಆಸಾಮಿಯೊಬ್ಬ ನಮ್ಮತ್ತ ಕುತೂಹಲದಿಂದ ದಿಟ್ಟಿಸುತ್ತಿದ್ದ. ಆತನನ್ನು ಮಾತನಾಡಿಸಿದಾಗ, ಆತನ ಹೆಸರು ಕಾಂಡೇರ ಉತ್ತಯ್ಯ, ಆತ ಶಮಿಯ ಚಿಕ್ಕಪ್ಪ ಎಂಬುದು ಗೊತ್ತಾಯಿತು. ಶಮಿಯು ಕಾರ್ಯಪ್ಪ ರಸ್ತೆಯಲ್ಲಿರುವ ಇನ್ನೊಂದು ಮನೆಯಲ್ಲಿದ್ದಾನೆಂದು ತಿಳಿಯಿತು.

ಅಲ್ಲಿಂದ ಶಮಿಯ ಮನೆಗೆ ಬಂದಾಗ, ನಮಗೆ ಅಚ್ಚರಿ ಕಾದಿತ್ತು. ಶಮಿಯ ಮೇಲೆ ಹಲ್ಲೆಯಾಗಿದ್ದು, ಆತ ಕಾವೇರಿ ಆಸ್ಪತ್ರೆಯಲ್ಲಿದ್ದಾನೆಂದು ಆತನ ಮಗ ಹೇಳಿದ. ನಾವು ಅತ್ತ ಧಾವಿಸಿದೆವು.

ಶಮಿ ಆಘಾತಗೊಂಡಿದ್ದು ಆತನ ಮುಖವೇ ಹೇಳುತ್ತಿತ್ತು. ಆತನ ಕೈ ಕಾಲುಗಳಿಗೆ ಬಲವಾದ ಏಟು ಬಿದ್ದಿತ್ತು. ಆದರೆ ದೂರು ಕೊಡದೇ ಆಗಮಿಸಿದ ಡಿಸೋಜನನ್ನು ಕಂಡು ಶಮಿಗೆ ಆಶ್ಚರ್ಯ. ಕರಮಚಂದ ಗೀಚು ಬರಹದ ಬಗ್ಗೆ ಸ್ಥೂಲವಾಗಿ ಹೇಳಿ, ಹಲ್ಲೆಯ ಬಗ್ಗೆ ವಿಚಾರಿಸಿದ. ಹಿಂದಿನ ದಿನ ಬೆಳಿಗ್ಗೆ ವಾಕಿಂಗಿಗೆ ಹೋಗಿದ್ದಾಗ, ಯಾರೋ ಹಲ್ಲೆ ಮಾಡಿದ್ದು ಎಂದ ಶಮಿ, ಉತ್ತಯ್ಯನ ಮೇಲೆ ಅನುಮಾನ ವ್ಯಕ್ತಪಡಿಸಿದ. ಇಗ್ಗುತ್ತಪ್ಪ ಗುಡಿಯ ಪಕ್ಕದಲ್ಲಿದ್ದ ಆ ಮನೆಯು ತನಗೆ ಬಂದ ಪಿತ್ರಾರ್ಜಿತ ಆಸ್ತಿಯಾಗಿದ್ದರೂ, ಉತ್ತಯ್ಯ ತನಗೂ ಹಕ್ಕಿದೆಯೆಂದು ವಾದಿಸುತ್ತಿದ್ದನಂತೆ. ಹೈಕೋರ್ಟಿನಲ್ಲಿ ತನ್ನ ಪರವಾಗಿ ತೀರ್ಪು ಬಂದರೂ, ಉತ್ತಯ್ಯನಿಗೆ ಅಸೂಯೆಯಿದ್ದು, ತಾನೀಗ ಆಸ್ತಿಯನ್ನು ಬೆಂಗಳೂರಿನ ಗುತ್ತಿಗೆದಾರರೊಬ್ಬರಿಗೆ ಮಾರಲು ಇಂದು ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧತೆಗಳಾಗಿದ್ದು, ಅದನ್ನು ತಡೆಯಲು ಹಲ್ಲೆ ನಡೆಸಿರಬಹುದೆನ್ನುವುದು ಶಮಿಯ ಊಹೆ.

ಆದರೆ ಆತನ ಪತ್ನಿ ಮಂಜರಿಯ ತರ್ಕವೇ ಬೇರೆ. ಆಕೆಯ ಊಹೆಯಂತೆ, ಆ ಜಾಗದ ಮೇಲೆ ಕಣ್ಣಿಟ್ಟಿದ್ದ ಇನ್ನೊಬ್ಬ ಬಿಲ್ಡರ್ ಕಿಶುವೇ ಇದನ್ನು ಮಾಡಿಸಿರಬೇಕು. ಮೊದಲಿಗೆ ಕಿಶುವಿಗೆ ಜಾಗ ಮಾರುವುದೆಂದು ಅಂತಿಮವಾಗಿದ್ದದ್ದು, ಕೊನೇ ಗಳಿಗೆಯಲ್ಲಿ ಬೆಂಗಳೂರಿನವ ಹೆಚ್ಚಿನ ದರ